C. S. (Main) Exam : 2011

**D-DTN-L-LOB**

# KANNADA

## Paper II

## (Literature)

*Time Allowed : Three Hours*

*Maximum Marks : 300*

***INSTRUCTIONS***

***Candidates should attempt questions 1 and 5 which are compulsory, and any THREE of the remaining questions, selecting at least ONE question from each Section.***

***Marks for each question are indicated against each.***

***Answers must be written in Kannada.***

## SECTION A

1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ, ಅವುಗಳ ಭಾವ ಮತ್ತು ಸ್ವಾರಸ್ಯಗಳನ್ನು ಕುರಿತು ಬರೆಯಿರಿ : *20×3=60*

(a) ಇದು ಪಾತಾಳಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮಾ

ಡಿದ ಕೂಪಂ ಪೆಱತಲ್ಲಿದುಗ್ರಲಯಕಾಳಾಂಭೋಧರಚ್ಛಾಯೆ ತಾ

ನೆ ದಲೆಂಬಂತಿರೆ ಕಾಚಮೇಚಕಚಯಚ್ಛಾಯಾಂಬುವಿಂ ಗುಣ್ಪಿನಿಂ

ಪುದಿದಿರ್ದತ್ತು ಸರೋವರಂ ಬಕಬಳಾಕಾನೀಕರಾವಾಕುಳಂ

(b) ಬೆಟ್ಟದ ಮೇಲೊಂದು ಮನೆಯಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗೆ ಅಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು !

(c) ಕಳಚಿ ದುರಿಯೋಧನನ ಬೆಳುಗೊಡೆ
ನೆಲಕೆ ಬೀಳ್ವಂದದಲಿ ಕೌರವ
ಕುಲದ ನಿಖಿಳೈಶ್ವರ್ಯವಿಳೆಗೊರ್ಗುಡಿಸಿ ಕೆಡೆವಂತೆ
ಥಳಥಳಿಪ ನಗೆಮೊಗದ ಗಂಟಿಕಿ
ಬಲಿದ ಹುಬ್ಬಿನ ಬಿಟ್ಟ ಕಂಗಳ
ಹೊಳೆವ ಹಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ

2. (a) ವಡ್ಡಾರಾಧನೆ ಕೃತಿಯ ವಿದ್ಯುಚ್ಚೋರನೆಂಬ ರಿಸಿಯ ಕತೆಯ ನಿರೂಪಣಾ ಕೌಶಲವನ್ನು ವಿವರಿಸಿ. *30*

(b) ಸುಕುಮಾರಸ್ವಾಮಿ ಕತೆಯ ಆಶಯವನ್ನು ಧಾರ್ಮಿಕ ನೆಲೆಯಲ್ಲಿ ಚರ್ಚಿಸಿರಿ. *30*

3. (a) ಹರಿಹರನ ನಂಬಿಯಣ್ಣನ ರಗಳೆಯಲ್ಲಿ ಭಕ್ತ ಮತ್ತು ದೈವದ ನಂಟನ್ನು ಚಿತ್ರಿಸಿರುವ ಬಗೆಯನ್ನು ವಿವರಿಸಿರಿ. *30*

(b) ಭರತೇಶ ವೈಭವದಲ್ಲಿ ನೀವು ಪಠ್ಯವಾಗಿ ಓದಿರುವ ಭಾಗದಲ್ಲಿ ಆದರ್ಶರಾಜನ ಗುಣಗಳು ನಿರೂಪಿತವಾಗಿರುವ ಬಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ. *30*

4. (a) ಕನಕದಾಸರ ಕೀರ್ತನೆಗಳಲ್ಲಿ ಕಂಡುಬರುವ ಕಾವ್ಯಗುಣವನ್ನು ಉದಾಹರಣೆಗಳೊಂದಿಗೆ ವಿವರಿಸಿ. *30*

(b) ಕನಕದಾಸರ ಕೃತಿಗಳು ಮಂಡಿಸುವ ಸಾಮಾಜಿಕ ನೆಲೆಗಳನ್ನು ಚರ್ಚಿಸಿರಿ. *30*

## SECTION B

5. ಈ ಕೆಳಗಿನ ಎಲ್ಲ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ (ಪ್ರತಿ ವಿಷಯಕ್ಕೆ ಸುಮಾರು 150 ಪದಗಳು) : *15×4=60*

   (a) 'ತುಘಲಕ್' ನಾಟಕದಲ್ಲಿ ಚಾರಿತ್ರಿಕ ಅಂಶಗಳು.

   (b) 'ಬೆಟ್ಟದ ಜೀವ' ಕಾದಂಬರಿಯಲ್ಲಿ ಪ್ರಕೃತಿ ಮತ್ತು ಪುರುಷ ಸಂಬಂಧ.

   (c) 'ಒಡಲಾಳ' ಕಾದಂಬರಿಯ ವಸ್ತು: ಪಾಲನೆ ಮತ್ತು ಹಸಿವು — ಪರಿಶೀಲಿಸಿ.

   (d) ಕನ್ನಡ ಜನಪದ ಕತೆಗಳ ಆಶಯ ವೈವಿಧ್ಯ.

6. (a) ಕನ್ನಡ ನವೋದಯ ಕಾವ್ಯದಲ್ಲಿ ಮಂಡಿತವಾದ ಪ್ರಕೃತಿ ಚಿತ್ರಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ. *30*

   (b) ಶೂದ್ರ ತಪಸ್ವಿ ನಾಟಕದ ಆಶಯವನ್ನು ಚರ್ಚಿಸಿ. *30*

7. (a) ಕನ್ನಡ ಸಣ್ಣಕತೆಗಳಲ್ಲಿ ನೀವು ಓದಿರುವ 'ಅಬಚೂರಿನ ಪೋಸ್ಟಾಫೀಸು' ಕತೆಯ ನಾಯಕನ ನೈತಿಕ ತೊಳಲಾಟವನ್ನು ಚಿತ್ರಿಸಿ. *30*

   (b) 'ಕ್ಲಿಪ್ ಜಾಯಿಂಟ್' ಕತೆಯಲ್ಲಿ ಸಂಪ್ರದಾಯ ಮತ್ತು ನಾವೀನ್ಯಗಳ ತಿಕ್ಕಾಟ ಮಂಡಿತವಾಗಿರುವ ಬಗೆಯನ್ನು ವಿವರಿಸಿ. *30*

8. (a) ಕನ್ನಡ ಜನಪದ ಗೀತೆಗಳ ವಸ್ತು ವೈವಿಧ್ಯಗಳನ್ನು ವಿವರಿಸಿ. *30*

   (b) ಕನ್ನಡ ಗಾದೆಗಳ ಸಾಮಾಜಿಕ ದೃಷ್ಟಿಯನ್ನು ಚರ್ಚಿಸಿ. *30*